ಶ್ರೀ ಎಂ. ಬಿ. ರಾಮಸ್ವಾಮಿ.—ಈ ಕಮಿಟಿಗಳಲ್ಲಿ ಆಯಾ ಇರಾಖೆಗಳಲ್ಲಿ ನಿವೃತ್ತರಾದ ಅಧಿಕಾರಿಗಳನ್ನೇ ಇಟ್ಟಿರುವುದರಿಂದ ರೆಕ್ಕೂಟ್ ಮಾಡುವಾಗ ಅನ್ಯಾಯವಾಗುತ್ತಿದೆ. ಈ ಕಾರಣದಿಂದ ಈ ನಿವೃತ್ತರಾದ ಅಧಿಕಾರಿಗಳ ಬದಲು ಬೇರೆ ನುರಿತವರನ್ನು ಹಾಕಿ ಎಲ್ಲರಿಗೂ ನ್ಯಾಯ ದೊರೆಯುವಂತೆ ಮಾಡುತ್ತೀರಾ ?

Sri D. DEVARAJ URS.—That is a matter of opinion.

ನಿಮ್ಮ ಅಭಿಪ್ರಾಯದಲ್ಲಿ ಬೇರೆ ರೀತಿಯಲ್ಲಿ ಕಮಿಟಿ ರಚನೆ ಮಾಡಬೇಕೆಂದು ಇದ್ದರೆ, ಆ ನಲಹೆಯನ್ನು ವಿಚಾರಮಾಡಿ ನೋಡ್ತೇಣ.

ಶ್ರೀ ಸಿ. ಎನ್. ಪಾಟೀಲ್.—ಈ ಕಮಿಟಿಗಳಿಗೆ ಮೂರನೇ ಎರಡು ಭಾಗದಷ್ಟು ಅಧಿಕಾರಿಗಳನ್ನ ಮತ್ತು ಮೂರನೇ ಒಂದು ಭಾಗದಷ್ಟು ಅಧಿಕಾರಿಗಳನ್ನು ಆಯಾ ಜಿಲ್ಲೆಗಳ ಅಧಿಕಾರೇತರರನ್ನು ನೇಮಕ ಮಾಡಬೇಕೆಂದು ಸಲಹೆ ಕೂಡುತ್ತೇನೆ. ಆ ರೀತಿ ಮಾಡುತ್ತೀರಾ ?

Sri D. DEVARAJ URS.—We will consider that suggestion.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಕೆಲವು ಇರಾಖೆಗಳಲ್ಲಿ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇನ್ನೂ ಪೂರ್ತಿಯಾಗಿಲ್ಲ; ಈ ಕೆಲಸವನ್ನು ಯಾವಾಗ ಪೂರ್ತಿಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಎಲ್ಲ ಇರಾಖೆಗಳಿಗೂ ಸಂಬಂಧಪಟ್ಟಂತೆ ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದ್ದೇವೆ. ಬಾದೆರಡು ಇರಾಖೆಗಳದ್ದು ಮಾತ್ರ ಉಳಿದಿದೆ. ಅದನ್ನು ಸಹ ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಕಮಿಟಿಗಳ ಕೆಲಸ ಪ್ರಯೋಜನಕಾರಿಯಾಗಿದೆಯೇ ಎಂಬ ಬಗ್ಗೆ ತಾವು ಏನಾದರು ವರದಿ ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗ ಪ್ರಯೋಜನಕಾರಿಯಾಗಿ ಕೆಲಸ ಮುಂದು ವರಿಯುತ್ತಿದೆ. ಪ್ರಯೋಜನಕಾರಿಯಾಗಿಲ್ಲ ಎಂದು ಗೊತ್ತಾದಾಗ ಏನು ಮಾಡಬೇಕು ಎಂಬುದನ್ನು ನೋಡೋಣ.

Blockwise Crop Growing System under K.R.S. Waters

727. Sri A. D. BILIGOWDA (Maddur).—

Will the Minister of State for Major Irrigation be pleased to state :—

(*a*) whether there is any proposal to introduce blockwise crop growing system in the areas irrigated by the K. R. Sagar water to overcome the imbalances in the method of raising crops in the atchkat area and also to provide irrigational facilities to the tail-end areas ;

(*b*) whether water is being drawn unauthorisedly from the Visveswaraiah Canals, through pumpsets all along their course and, if so, the number of pumpsets installed ;

(*c*) whether any action has been taken to remove such pumpsets and, if so, the number of them removed and the number still pending ?

Sri H. N. NANJE GOWDA (Minister of State for Major Irrigation).—

(*a*) The Chief Engineer is examining such a proposal. The report is not yet received in Government.

(*b*) Yes. 235 numbers.

(*c*) Action has been taken to remove all the pumpsets.

ಶ್ರೀ ಎ. ಡಿ. ಬಿಳಿಗೌಡ.—ಈವಿಚಾರದಲ್ಲಿ ಸರ್ಕಾರದವರು ವರದಿಯನ್ನು ಬೇಗ ತರಿಸಿಕೊಂಡು ಜಾರಿಗೆ ಕೊಟ್ಟರೆ ಕೊನೆಯಲ್ಲಿನ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವುದಲ್ಲದೆ, ಬೆಳೆಗಳನ್ನು ಬದಲಾವಣೆ ಮಾಡುವುದರಿಂದ ಭೂಮಿಯ ಸಾರವೂ ನಷ್ಟವಾಗುವುದಿಲ್ಲ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ವರದಿಯನ್ನು ಬೇಗ ತರಿಸಿ ಅದನ್ನು ಅನುಷ್ಠಾನದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ವರದಿಯನ್ನು ಬೇಗ ತರಿಸಿ ನೋಡುತ್ತೇವೆ.

ಶ್ರೀ ಎ. ಡಿ. ಬಿಳಿಗೌಡ.—ಈ ಪಂಪುಸೆಟ್ಟುಗಳನ್ನು ಜೋಡಿಸುತ್ತಿರುವುದರಿಂದ ಆಗುತ್ತಿರುವ ಅನಾಹುತವೆಂದರೆ ಕೊನೆಯಲ್ಲಿರುವ ಪ್ರದೇಶಕ್ಕೆ ನೀರು ಸರಬರಾಜು ಆಗದೆ ಅಲ್ಲಿನವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದಕಾರಣ ಅನಧಿಕೃತವಾಗಿ ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಇರಿಗೇಷನ್ ಆಕ್ಟ್ ಪ್ರಕಾರ ಕ್ರಮ ಕೈಕೊಳ್ಳಬೇಕೆಂದು ಜಿಲ್ಲಾಧಿಕಾರಿಯವರಿಗೆ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ ಅವರಿಗೆ ಬರೆದು ತಿಳಿಸಲಾಗಿದೆ.

ಶ್ರೀ ಸಿ. ಎನ್. ಪಾಟೀಲ್.—ಈಗಿರತಕ್ಕಂಥ ಇರಿಗೇಷನ್ ಆಕ್ಟ್ ಅಷ್ಟು ಶಕ್ತಿಯುತವಾಗಿಲ್ಲ ವಾದ್ದರಿಂದ ಕಾಯ್ದೆಯನ್ನು ಪರಿವರ್ತನೆ ವಿರುದ್ಧ ಕ್ರಮ ಕೈಕೊಳ್ಳುವುದು ಕಷ್ಟವಾಗಿದೆ; ಆದ ಕಾರಣ ಈಗಿರತಕ್ಕಂಥ ಆಕ್ಟ್‌ನ್ನು ತಿದ್ದುಪಡಿ ಮಾಡುವ ವಿಚಾರ ಸರ್ಕಾರಕ್ಕೆ ಏನಾದರೂ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಆ ಅಭಿಪ್ರಾಯ ಇಲ್ಲ. ಅದು ಯೋಚನೆ ಮಾಡಿ ಹೇಳಬೇಕಾದ ವಿಷಯ.

ಶ್ರೀ ಎಂ. ಬಿ. ರಾಮಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ 235 ಪಂಪುಸೆಟ್ಟುಗಳು ಎಂದು ಹೇಳಿದ್ದೀರಿ. ಇವರುಗಳು ಎಷ್ಟು ಕಾಲದಿಂದ ಅನಧಿಕೃತವಾಗಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಮತ್ತು ಇದರ ಬಗ್ಗೆ ಅಲ್ಲಿಯ ಇತರರ ದೂರಿನಿಂದ ದೂರುಗಳು ಏನಾದರೂ ಬಂದಿದೆಯೇ ? ಬಂದಿದ್ದರೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಹಿಂದೆ ಹೇಗಾಗುತ್ತಿತ್ತು ಎಂದರೆ, ಅವರವರ ಜಮೀನು ಗಳಲ್ಲಿ ಬಾವಿ ತೆಗೆದಿದ್ದಾರೆಂದು ಶಾನುಭೋಗರು ಸರ್ಟಿಫಿಕೇಟ್ ಕೊಟ್ಟರೆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿ ಕೊಡುತ್ತಿದ್ದರು. ಈ ರೀತಿ ಅನಧಿಕೃತವಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿರುವುದು ಬಹುದಿನದಿಂದ ನಡೆದಿದೆ. ಇದನ್ನು ತಪ್ಪಿಸಬೇಕೆಂದು ಮತ್ತು ಪರ್ಮಿಷನ್ ಇಲ್ಲದೆ ಯಾರಾದರೂ ಪಂಪುಸೆಟ್ಟುಗಳನ್ನು ಇಟ್ಟುಕೊಂಡರೆ ಅದನ್ನು ತೆಗೆದುಹಾಕ ಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡು ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟಿದೆ.

ಶ್ರೀ ಎ. ಡಿ. ಬಿಳಿಗೌಡ.—ಕೃಷ್ಣರಾಜಸಾಗರದ ನಾಲೆಯ ಮೇಲ್ಭಾಗದಲ್ಲಿ ಈ ರೀತಿ ಅಕ್ರಮ ವಾಗಿ ಪಂಪುಸೆಟ್ಟುಗಳನ್ನು ಇಟ್ಟುಕೊಂಡು ನೀರನ್ನು ಉಪಯೋಗ ಮಾಡುತ್ತಿರುವವರು ಯಾವ ವಿಧವಾದಂಥ ತೆರಿಗೆ ವಗ್ಗೈರೆಯನ್ನು ಸರ್ಕಾರಕ್ಕೆ ಕೊಡುತ್ತಿಲ್ಲವೆಂದು ನಾನು ಭಾವಿಸಿದ್ದೇನೆ. ಈ ರೀತಿ ಅನಧಿಕೃತವಾಗಿ ನೀರನ್ನು ಉಪಯೋಗ ಮಾಡುತ್ತಿರುವುದರಿಂದ ಕೊನೆಯಲ್ಲಿರುವ ಪ್ರದೇಶದ ವರಿಗೆ ತೊಂದರೆಯಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಕೊನೆಯ ಭಾಗದವರಿಗೆ ತೊಂದರೆಯಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ; ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

Promotion of Secretaries and Assistant Secretaries of Marketing Department to Gazetted Cadre

786. Sri T. TARE GOWDA (Kallambella).—

Will the Minister for Co-operation be pleased to state :—

(*a*) whether the Registrar of Co-operative Societies, the Chief Marketing Officer submitted to Government proposal regarding